ರಾಜ್ಯದಲ್ಲಿನ ವಿದ್ಯುತ್ ಉತ್ಪಾದನೆ

೫೩೩. ಶ್ರೀ ಜಿ. ರಾಜುಗೌಡ (ಹನೂರು).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ವಿದ್ಯುತ್ ಕೊರತೆಯನ್ನು ನೀಗಲು ಸರ್ಕಾರ ಕೈಗೊಂಡಿರುವ ಕಾರ್ಯ ಕ್ರಮಗಳೇನು ?

ಆ) ವಿದ್ಯುತ್ ದರದ ಪುನರ್ ವಿಮರ್ಶೆಯಿಂದ ಎಷ್ಟು ಹೆಚ್ಚಿನ ಸಂಪನ್ಮೂಲವನ್ನು ನಿರೀಕ್ಷಿಸ ಲಾಗಿದೆ ?

ಇ) ೭ನೇ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಗೆ ವಿದ್ಯುತ್ ಕೊರತೆ ಎಷ್ಟಾಗ ಬಹುದು ?

ಈ) ರಾಜ್ಯದಲ್ಲಿ ದೊರೆಯಬಹುದಾದ ವಿದ್ಯುತ್‌ನಲ್ಲಿ ಕೇಂದ್ರ ಸರ್ಕಾರದ ಕೈಗಾರಿಕೆಗಳಿಗೆ ಹಾಗೂ ರಾಜ್ಯ ಸರ್ಕಾರದ ಕೈಗಾರಿಕೆಗಳಿಗೆ ಎಷ್ಟು ಬಳಕೆಯಾಗುತ್ತಿದೆ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿ).—

ಅ) ರಾಜ್ಯದಲ್ಲಿ ವಿದ್ಯುತ್ ಕೊರತೆ ನೀಗಲು :

೧) ನೆರೆ ರಾಜ್ಯಗಳಿಂದ ವಿದ್ಯುತ್ ಸಹಾಯ ಪಡೆಯಲಾಗುತ್ತಿದೆ.

೨) ಕೇಂದ್ರದ ಯೋಜನೆಗಳಲ್ಲಿನ ರಾಜ್ಯದ ಪಾಲನ್ನು ಪಡೆಯಲಾಗುತ್ತಿದೆ.

೩) ಆಂತರಿಕ ಉತ್ಪಾದನೆ ಹೆಚ್ಚಿಸಲು

ಅ) ಪ್ರಗತಿಯಲ್ಲಿರುವ ವಿದ್ಯುತ್ ಯೋಜನೆಗಳನ್ನು ತ್ವರಿತಗತಿಯಲ್ಲಿ ಮಾಡಿ ಮುಗಿಸಲು ಕ್ರಮ ಕೈಗೊಂಡಿದೆ.

ಆ) ಹೊಸ ಹೊಸ ವಿದ್ಯುತ್ ಯೋಜನೆಗಳನ್ನು ರೂಪಿಸಲಾಗುತ್ತಿದೆ.

೪) ಮಂಡಳಿ ಬೆಂಗಳೂರಿನ ಯಲಹಂಕ ಬಳಿ ೧೨೦ ಮೆ. ವಾ. ಯೋಜನೆಯ ಡೀಸಲ್ ಆಧಾರಿತ ವಿದ್ಯುದುತ್ಪಾದನಾ ಘಟಕ ಸ್ಥಾಪಿಸಲು ಕ್ರಮ ಕೈಗೊಂಡಿದೆ.

೫) ಗ್ರಾಹಕರು ಸ್ವತಃ ವಿದ್ಯುದುತ್ಪಾದನೆ ಮಾಡಲು ಕ್ಯಾಪ್ಟಿವ್ ಜನರೇಟರುಗಳನ್ನು ಸ್ಥಾಪಿಸಿಕೆ ಇಳ್ಳಲು ಅನುಮತಿ ನೀಡಲಾಗುತ್ತಿದೆ.

ಆ) ವಿದ್ಯುತ್ ದರದ ಪುನರ್ ವಿಮರ್ಶೆಯಿಂದ ೧೯೮೭–೮೮ನೇ ಸಾಲಿನಲ್ಲಿ ೨–೫–೧೯೮೭ ರಿಂದ ನಿರೀಕ್ಷಿಸಲಾಗಿದ್ದು ಹೆಚ್ಚುವರಿ ಸಂಪನ್ಮೂಲ ೮೧.೭೦ ಕೋಟಿ ರೂಪಾಯಿಗಳು.

ಇ) ಸರ್ಕಾರವು ನೇಮಿಸಿದ ವಿದ್ಯುತ್ ಯೋಜನೆಗಳ ದೀರ್ಘಾವಧಿ ಯೋಜನಾ ಸಮಿತಿ ವರದಿ ಯಂತೆ ಏಳನೇ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಗೆ ೩೦೫೧ ದಶಲಕ್ಷ ಯೂನಿಟ್ಟುಗಳ ವಿದ್ಯುತ್ ಕೊರತೆ ಉಂಟಾಗುತ್ತದೆ. (ಇದು ಸರಿಯಾದ ಮುಂಗಾರು ಮಳೆ ಆದಲ್ಲಿ)

ಈ) ರಾಜ್ಯದಲ್ಲಿ ೧೯೮೬–೮೭ನೇ ಸಾಲಿನಲ್ಲಿ ಎಲ್ಲಾ ಹೆಚ್. ಟಿ. ಮತ್ತು ಎಲ್. ಟಿ. ಕೈಗಾರಿಕೆ ಗಳಿಗೆ ಒಟ್ಟು ೪೨೮೮ ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಸರಬರಾಜಾಯಿತು. ಇದರಲ್ಲಿ ಎಲ್ಲಾ ವರ್ಗದ (ಖಾಸಗಿ ಕೇಂದ್ರ ಸರ್ಕಾರದ ರಾಜ್ಯ ಸರ್ಕಾರದ) ಕೈಗಾರಿಕೆಗಳಿಗೂ ಒದಗಿಸಿದ ವಿದ್ಯುತ್ ಸೇರಿದೆ.

ಭಾಗ್ಯ ಜ್ಯೋತಿ ಯೋಜನೆಯ ರೂಪರೇಷೆಗಳು

೫೩೪. ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಾಗ್ಯ ಜ್ಯೋತಿ ಯೋಜನೆಯ ರೂಪುರೇಷೆಗಳೇನು ?

ಅ) ಈ ಯೋಜನೆಯಿಂದ ರಾಜ್ಯದಲ್ಲಿ ಪ್ರಯೋಜನ ಪಡೆದಿರುವವರ ಸಂಖ್ಯೆ ಎಷ್ಟು (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು).

ಇ) ಈ ಯೋಜನೆಯಡಿಯಲ್ಲಿನ ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಮೀಟರನ್ನು ಅಳವಡಿಸಲಾಗಿದೆಯೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಭಾಗ್ಯ ಜ್ಯೋತಿ ಯೋಜನೆಯನ್ವಯ ಸಮಾಜದಲ್ಲಿ ದುರ್ಬಲ ವರ್ಗದವರಿಗೆ ಮನೆಗೊಂದು ವಿದ್ಯುದ್ದೀಪವನ್ನು ಒದಗಿಸಲಾಗುತ್ತದೆ. ಈ ಫಲಾನುಭವಿಗಳನ್ನು ಮಂಡಲ ಪಂಚಾಯ್ತಿ ಜಿಲ್ಲಾ ಪರಿಷತ್ತಿನವರು ಗುರುತಿಸುವರು. ಹಾಲಿ ಒಟ್ಟು ಫಲಾನುಭವಿಗೆ ೪೦೦-೦೦ರೂ.ಗಳಷ್ಟು ವೆಚ್ಚ ಮಾಡಲಾಗುತ್ತದೆ. ಇದರಲ್ಲಿ ಶೇ. ೨೦ ರಷ್ಟನ್ನು ರಾಜ್ಯ ಸರ್ಕಾರ ಸಹಯ ಧನವನ್ನಾಗಿ ಮಂಡಳಿಗೆ ನೀಡುತ್ತದೆ. ಉಳಿದ ಹಣವನ್ನು ಫಲಾನುಭವಿಗಳು ೧೫ ವರ್ಷಗಳ ಅವಧಿಯಲ್ಲಿ ಮಾಹೆಯಾನ ರೂ. ೨.೬೦ (ಅಸಲು ಮತ್ತು ಬಡ್ಡಿ ಸೇರಿ) ಗಳನ್ನು ಮಾಸಿಕ ವಿದ್ಯುತ್ ಬಳಕೆಯ ಬಾಬ್ತು ರೂ. ೨.೫೦ ಕೂಡ ಮಂಡಳಿಗೆ ಪಾವತಿ ಮಾಡಬೇಕು. ಪರಿಶಿಷ್ಟ ಜಾತಿ ಮಂತ್ತು ಪರಿಶಿಷ್ಟ ವರ್ಗದವರಿಗೆ ಆದ್ಯತೆ ನೀಡಲಾಗುತ್ತದೆ ಹಾಲಿ ಶೇ ೬೦ ರಷ್ಟು ಫಲಾನುಭವಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದಾರೆ.

ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯ ಫಲ ಪಡೆದವರ ಸಂಖ್ಯೆ ಕೆಳಕಂಡಂತೆ ಇದೆ.

೧೯೮೪-೮೫	—	೫೧,೧೬೫
೧೯೮೫-೮೬	—	೨೫,೫೭೧
೧೯೮೬-೮೭	—	೪೮,೯೬೧

ಇ) ಇಲ್ಲ.

• ಸಿಮೆಂಟ್ ಫ್ಯಾಕ್ಟರಿಗಳ ಹಣದ ರೂಪದ ಅಗ್ರಿಮೆಂಟ್‌ಗಳು

೯೯೧. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಸಿಮೆಂಟ್ ಕಾರ್ಖಾನೆಗಳಿವೆ ?

ಆ) ಅವುಗಳು ಯಾವ ಯಾವ ಮಂಡಲ್ ಪಂಚಾಯಿತಿಗೆ ಸೇರಿವೆ ?

ಇ) ಮಂಡಲ್ ಪಂಚಾಯಿತಿ ಶಾಸನದ ಪ್ರಕಾರ ಆಯಾ ಮಂಡಲ್ ಪಂಚಾಯಿತಿಗಳು ಮಾಡಿಕೊಂಡಿರುವ ಹಣದ ರೂಪದ ಅಗ್ರಿಮೆಂಟ್‌ಗಳು ಸರ್ಕಾರದ ಗಮನದಲ್ಲಿದೆಯೇ ?

ಈ) ಹಾಗಾದರೆ ಯಾವ ಯಾವ ವ್ಯಕ್ತಿಗಳು ಯಾವ ಯಾವ ಮಂಡಲ್ ಪಂಚಾಯಿತಿಗಳಿಗೆ ಹಣವನ್ನು ಕೊಟ್ಟಿರುವುದು ಮತ್ತು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೫ ಮಧ್ಯಮ ಪ್ರಾಗೂ ಒಂದು ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳಿವೆ.

ಆ) ಮಂಡಲ್ ಪಂಚಾಯಿತಿಯ ವಿವರಗಳು ಇಲ್ಲದೆ ಇರುವುದರಿಂದ ಕಾರ್ಯಸ್ಥಾನ ಸ್ಥಳ ಮತ್ತು ತಾಲ್ಲೂಕುಗಳ ವಿವರಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಇ) ಗಮನಕ್ಕಿದೆ.

ತಮ್ಮ ಉತ್ಪಾದನಾ ಸಾಮರ್ಥ್ಯಕ್ಕೆ ತಕ್ಕಂತೆ ಪಂಚಾಯಿತಿಗಳಿಗೆ ಪರಿಹಾರ ನೀಡಲು ಒಪ್ಪಿಗೆ ನೀಡಿ ಈ ಕಂಪನಿಗಳು ಸರ್ಕಾರಕ್ಕೆ ಮುಚ್ಚಳಿಕೆ ನೀಡಿವೆ.

ಈ) ವಿವರಗಳು ಲಭ್ಯವಿಲ್ಲ.